**ದಿಃ 18.06.2026**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಘಟನೆ ನಡೆಯಿತೆಂದು ಹೇಳಿದ ಇಂಜಿನಿಯರಿಂಗ್ ಕಾಲೇಜಿನ ಬಳಿ ಯಾವಾಗಲೂ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಿದ ಸಮಯದಲ್ಲಿ ಸಂಜೆ 7.00 ಗಂಟೆಯಾಗಿತ್ತೆಂದು ಹೇಳಿದ್ದು, ಆ ಕಾರಣ ಆ ಸ್ಥಳದಲ್ಲಿ ಆ ವೇಳೆಗೆ ಕತ್ತಲು ಇತ್ತು ಎಂದರೆ ಸರಿ. ಸದರಿ ಸ್ಥಳದಲ್ಲಿ ಕತ್ತಲು ಇದ್ದ ಕಾರಣ ಘಟನೆ ನಡೆಯಿತೆಂದು ಹೇಳಿದಾಗ ನನಗೆ ಮತ್ತು ಚಾಸಾ–2 ರಿಂದ 4 ಇವರಿಗೆ ಯಾರು ಅವಾಚ್ಯ ಶಬ್ದಗಳಿಂದ ಬೈದರೆಂದು ನನಗೆ ತಿಳಿಯಲಿಲ್ಲವೆಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಘಟನೆ ನಡೆಯಿತೆಂದು ಹೇಳಿದಾಗ ಚಾಸಾ–2 ಮತ್ತು 3 ಇವರಿಗೆ ಯಾರು ಚಾಕುವಿನಿಂದ ಹಲ್ಲೆ ಮಾಡಿ ಗಾಯಗೊಳಿಸಿದರೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಮತ್ತು ಆ ವೇಳೆಗೆ ನನಗೆ ಚಾಸಾ–2 ಮತ್ತು 3 ಇವರಿಗೆ ಚಾಕುವಿನಿಂದ ಯಾರು ಹಲ್ಲೆ ಮಾಡಿದರೆಂದು ಗೊತ್ತಾಗಲಿಲ್ಲವೆಂದರೆ ಸರಿ. ಸದರಿ ಘಟನೆ ನಡೆಯಿತೆಂದು ಹೇಳಿದಾಗ ನನ್ನನ್ನು ಮತ್ತು ಚಾಸಾ–4 ಇವರನ್ನು ಯಾರು ನೂಕಿದರೆಂದು ನನಗೆ ಗೊತ್ತಾಗಲಿಲ್ಲವೆಂದರೆ ಸರಿ.

2) ನಿಪಿ–1 ಎಂದು ಗುರುತಿಸಿದ ಪಿರ್ಯಾದಿಯಲ್ಲಿಯ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲಾ ಮತ್ತು ಪೋಲೀಸರು ಆ ದಾಖಲೆಯಲ್ಲಿ ಏನು ಬರೆದುಕೊಂಡಿರುವರು ಎಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ನಿಪಿ–1 ಎಂದು ಗುರುತಿಸಿದ ದಾಖಲೆಗೆ ಪೋಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಆ ದಾಖಲೆಗೆ ನನ್ನ ಸಹಿ ಹಾಕಿರುವೆನು ಎಂದರೆ ಸರಿ. ನಿಪಿ–1 ಎಂದು ಗುರುತಿಸಿದ ದಾಖಲೆಗೆ ಪೋಲೀಸರು ನನ್ನ ಸಹಿ ತೆಗೆದುಕೊಂಡಾಗ ಇನ್ನು ಅನೇಕ ದಾಖಲೆಗಳಿಗೆ ಅವರು ನನ್ನಿಂದ ಸಹಿ ಪಡೆದಿರುತ್ತಾರೆ. ನಿಪಿ–2 ಮತ್ತು 3 ಎಂದು ಗುರುತಿಸಿದ ದಾಖಲೆಗೆ ಪೋಲೀಸರು ನನ್ನ ಸಹಿಯನ್ನು ಠಾಣೆಯಲ್ಲಿ ಪಡೆದಿರುವರು ಎಂದರೆ ಸರಿ. ನಿಪಿ–2 ಮತ್ತು 3 ಎಂದು ಗುರುತಿಸಿದ ದಾಖಲೆಗೆ ಪೋಲೀಸರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿರುವೆನು ಎಂದರೆ ಸರಿ. ನಿಪಿ–2 ಎಂದು ಗುರುತಿಸಿದ ಪಂಚನಾಮೆ ಮತ್ತು ನಿಪಿ–3 ಎಂದು ಗುರುತಿಸಿದ ಕಚ್ಚಾ ನಕಾಶೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲವೆಂದರೆ ಸರಿ. ನಿಪಿ–4 ಮತ್ತು 5 ಎಂದು ಗುರುತಿಸಿದ ಪೋಟೋಗಳನ್ನು ಪೋಲೀಸರು ಏಕೆ ತೆಗೆಸಿದರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ಎಂಒ–1 ಎಂದು ಗುರುತಿಸಿದ ಕಟರ್ ನ್ನು ನಾನು ಈ ಹಿಂದೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಡುವಾಗ ಅದನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುವೆನು ಎಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಪೋಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದು ಕೊಂಡು ಹೋಗಿರುವುದಿಲ್ಲ ಮತ್ತು ನನ್ನ ಸಮಕ್ಷಮದಲ್ಲಿ ನಿಪಿ–2 ರಂತೆ ಪಂಚನಾಮೆ ಮಾಡಿರುವುದಿಲ್ಲ ಮತ್ತು ಎಂಒ–1 ರಿಂದ 7 ಇವುಗಳನ್ನು ಯಾವುದೇ ಘಟನಾ ಸ್ಥಳದಿಂದ ಜಪ್ತುಗೊಳಿಸಿರುವುದಿಲ್ಲವೆಂದರೆ ಸರಿ.

3) ಮುಖ್ಯವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ನಾನು ಪೋಲೀಸರು ಹೇಳಿಕೊಟ್ಟಿದ್ದಕ್ಕೆ ಅನುಗುಣವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿರುವೆನು ಎಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ

ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಆತನು ಚಾಸಾ–2 ಮತ್ತು 3 ಇವರಿಗೆ ಚಾಕುವಿನಿಂದ ಇರಿದನೆಂದು ಹೇಳಿದ್ದನ್ನು ನಾನು ನೋಡಿರುವುದಿಲ್ಲ ಮತ್ತು ಆರೋಪಿಯು ನನ್ನನ್ನು ಮತ್ತು ಚಾಸಾ–4 ಇವರನ್ನು ನೂಕಿರುವುದಿಲ್ಲವೆಂದರೆ ಸರಿ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಮುಖ್ಯವಿಚಾರಣೆಯಲ್ಲಿ ಅಭಿಯೋಜನೆಯ ಪರ ಸಾಕ್ಷಿ ನೀಡಿದ್ದು, ಆದರೆ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನೀಡಿದ್ದು, ಆ ಕಾರಣ ಸಾಕ್ಷಿಯನ್ನು ಮರುವಿಚಾರಣೆ ಮಾಡಲು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಮುಖ್ಯವಿಚಾರಣೆ ಮತ್ತು ಪಾಟೀ ಸವಾಲನ್ನು ಪರಿಶೀಲಿಸಿ ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯ ಮರುವಿಚಾರಣೆ ಮಾಡಲು ಅನುಮತಿ ನೀಡುವುದು ಸೂಕ್ತವೆಂದು ಕಂಡು ಬಂದಿದ್ದು, ಕಾರಣ ಸಾಕ್ಷಿಯನ್ನು ಮರು ವಿಚಾರಣೆ ಮಾಡಲು ಅನುಮತಿ ನೀಡಲಾಗಿದೆ).**

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಹಾಲಿ ನಾನು ಮತ್ತು ಚಾಸಾ–2 ರಿಂದ 5 ಕೂಡಿಕೊಂಡು ಆರೋಪಿಯೊಂದಿಗೆ ಕೇಸನ್ನು ರಾಜೀ ಮಾಡಿಕೊಂಡಿರುವೆವು ಎಂದರೆ ಸರಿ. ದಿಃ 18.12.2025 ರಂದು ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯವಿಚಾರಣೆಯ ಸಾಕ್ಷಿಯನ್ನು ನೀಡಿದ್ದು, ಆ ವೇಳೆಗೆ ನಾನು ನುಡಿದ ಸಾಕ್ಷಿಯು ನಿಜವಿದ್ದು, ಆದರೆ ಈಗ ನಾವು ಆರೋಪಿಯೊಂದಿಗೆ ಕೇಸನ್ನು ರಾಜಿ ಮಾಡಿಕೊಂಡ ಕಾರಣ, ನನಗೆ ಈಗ ಘಟನೆಯ ಬಗ್ಗೆ ಏನೂ ಗೊತ್ತಿಲ್ಲವೆಂದು ಮತ್ತು ನಿಪಿ–1 ರಿಂದ 3 ಎಂದು ಗುರುತಿಸಿದ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲವೆಂದು ಹಾಗೂ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲವೆಂದು ಹಾಗೂ ಆತನು ಚಾಸಾ–2 ಮತ್ತು 3 ಇವರಿಗೆ ಚಾಕುವಿನಿಂದ ಇರಿದಿದ್ದನ್ನು ನಾನು ನೋಡಿಲ್ಲವೆಂದು ಮತ್ತು ಆರೋಪಿಯು ನನ್ನನ್ನು ಮತ್ತು ಚಾಸಾ–4 ಇವರನ್ನು ನೂಕಿಲ್ಲವೆಂದು ಈಗ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ಈಗ ಆರೋಪಿಯೊಂದಿಗೆ ರಾಜೀ ಮಾಡಿಕೊಂಡ ಕಾರಣ ಈಗ ನನಗೆ ಏನೂ ಗೊತ್ತಿಲ್ಲವೆಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿತ್ರದುರ್ಗ.